**ಪತ್ರಿಕಾ ಟಿಪ್ಪಣಿ: ಜನವರಿ 03, 2022 ರಿಂದ 15 ರಿಂದ 18 ವರ್ಷದ ಮಕ್ಕಳ ಕೋವಿಡ್ - 19 ಲಸಿಕಾಕರಣ**

- ಭಾರತ ಸರ್ಕಾರದ ಮಾರ್ಗಸೂಚಿಯಂತೆ, ರಾಜ್ಯದಲ್ಲಿ ಕೋವಿಡ್-19 ಲಸಿಕಾಕರಣವನ್ನು ಜನವರಿ 16, 2021 ರಿಂದ ಹಂತ- ಹಂತವಾಗಿ ಪ್ರಾರಂಭಿಸಲಾಯಿತು.
- ದಿನಾಂಕ 03.01.2022 ರಿಂದ 15-18 ವರ್ಷದ ಮಕ್ಕಳ ಕೋವಿಡ್-19 ಲಸಿಕಾಕರಣವನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗುವುದು.
- 2007 ನೇ ಇಸವಿಯಲ್ಲಿ ಜನಿಸಿದ ಅಥವಾ 2007 ಕ್ಕೂ ಮುನ್ನ ಜನಿಸಿದ ಮಕ್ಕಳು ಕೋವಿಡ್-19 ಲಸಿಕೆ ಪಡೆಯಲು ಅರ್ಹರಿರುತ್ತಾರೆ.
- ಕೋವಾಕ್ಸಿನ್ ಲಸಿಕೆ ಬಳಸಿ ಲಸಿಕಾಕರಣ ನಡೆಸಲಾಗುವುದು.
- ಮೊದಲನೇ ಡೋಸ್ ಪಡೆದ 28 ದಿನಗಳ ನಂತರ ಎರಡನೇ ಡೋಸ್ ಲಸಿಕೆ ನೀಡಲಾಗುವುದು.
- **ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ರವರು ದಿ. 03.01.2022 ರಂದು ಬೆಳಗ್ಗೆ 9:30 ಗೆ ಬಿ.ಬಿ.ಎಂ.ಪಿ. ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಸ್ನಾತಕೋತ್ತರ ಕಾಲೇಜು, ಭೈರವೇಶ್ವರ ನಗರ, ಮೂಡಲಪಾಳ್ಯ, ವಾರ್ಡ್ ಸಂಖ್ಯೆ 127, ಬೆಂಗಳೂರು ಇಲ್ಲಿ ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.**

## <u>ಮಕ್ಕಳ ಲಸಿಕಾಕರಣದ ಯಶಸ್ವಿ ಅನುಷ್ಠಾನಕ್ಕಾಗಿ ರಾಜ್ಯ ಮತ್ತು ಜಿಲ್ಲೆಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.</u>

- ಈ ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ತಾಲ್ಲೂಕು ಮಟ್ಟದಲ್ಲಿ ವಿಧಾನ ಸಭಾ ಸದಸ್ಯರು ಉದ್ಘಾಟಿಸಲಿದ್ದಾರೆ.
- ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅರೋಗ್ಯ ಮತ್ತು ಶಿಕ್ಷಣ ಇಲಾಖೆಗಳ ಅಧಿಕಾರಿಗೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿದ್ದಾರೆ.
- ರಾಜ್ಯದಲ್ಲಿ 31.75 ಲಕ್ಷ 15-18 ವರ್ಷದ ಮಕ್ಕಳು ಲಸಿಕೆ ಪಡೆಯಲಿದ್ದಾರೆ.
- ಭಾರತ ಸರ್ಕಾರವು ರಾಜ್ಯಕ್ಕೆ ಅಗತ್ಯ ಕೋವಾಕ್ಸಿನ್ ಲಸಿಕಾ ಡೋಸ್ ಗಳನ್ನು ಸರಬರಾಜು ಮಾಡುವುದು.
- ಮೊದಲನೇ ದಿನದಂದು 4000 ಕ್ಕಿಂತ ಹೆಚ್ಚು ಲಸಿಕಾ ಸತ್ರಗಲ್ಲಿ 6 ಲಕ್ಷ ಕ್ಕಿಂತ ಹೆಚ್ಚು ಮಕ್ಕಳಿಗೆ ಲಸಿಕಾಕರಣ ನಡೆಸುವ ಗುರಿಯನ್ನು ರಾಜ್ಯವು ಹೊಂದಿದೆ.
- ರಾಜ್ಯವು 16 ಲಕ್ಷ ಕೊವ್ಯಾಕ್ಸಿನ್ ಲಸಿಕಾ ಡೋಸ್ ದಾಸ್ತಾನನ್ನು ಹೊಂದಿರುತ್ತದೆ. ಎಲ್ಲ ಜಿಲ್ಲೆಗಳಲ್ಲಿ ಲಾಜಿಸ್ಟಿಕ್, ಸಿಬ್ಬಂದಿ ಇತರೆ ಅಂಶಗಳನ್ನು ಒಳಗೊಂಡು ಸೂಕ್ಷ್ಮ ಕ್ರಿಯಾ ಯೋಜನೆಗಳನ್ನು ರಚಿಸಲಾಗಿದೆ.
- 15-18 ವರ್ಷದ ಮಕ್ಕಳಿಗೆ ಶಾಲೆ ಮತ್ತು ಕಾಲೇಜುಗಳಲ್ಲಿ ಲಸಿಕಾಕರಣ ನಡೆಸಲಾಗುವುದು. ಈ ಶಾಲೆ ಮತ್ತು ಕಾಲೇಜುಗಳು ಲಸಿಕಾಕರಣಕ್ಕಾಗಿ ಬೆಂಬಲ ಸಿಬ್ಬಂದಿ ಮತ್ತು ಸ್ಥಳಾವಕಾಶ ಕಲ್ಪಿಸುತ್ತವೆ.
- ಲಸಿಕಾಕರಣ ದಿನ ಲಸಿಕೆ ಪಡೆಯಲು ಸಾಧ್ಯವಾಗದ ಮಕ್ಕಳಿಗೆ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುವುದು.
- ಸಹ ಅಸ್ವಸ್ಥತೆ ಹೊಂದಿರುವ ಮಕ್ಕಳಿಗೆ ಅರೋಗ್ಯ ಕೇಂದ್ರಗಳಲ್ಲಿ ವೈದ್ಯರ ಮೇಲ್ವಿಚಾರಣೆಯಲ್ಲಿ ಲಸಿಕೆ ನೀಡಲಾಗುವುದು.

- ಲಸಿಕೆ ಪಡೆದ ಮಕ್ಕಳು ಲಸಿಕಾ ಪ್ರಮಾಣ ಪತ್ರವನ್ನು ಕೋವಿನ್ ಪೋರ್ಟಲ್ ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
- ಆನ್ ಲೈನ್ ತರಗತಿಗಳನ್ನು ನಡೆಸುವ ಶಾಲೆಗಳಲ್ಲಿ ದಿನಾಂಕ ನಿಗದಿ ಪಡಿಸಿ ಮಕ್ಕಳನ್ನು ಬರಹೇಳಿ ಲಸಿಕಾಕರಣ ನಡೆಸಲಾಗುವುದು.
- ಶಾಲೆಯಿಂದ ಹೊರಗುಳಿದ ಅಥವಾ ಶಾಲೆ ಬಿಟ್ಟ ಮಕ್ಕಳನ್ನು ಕಾರ್ಮಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ ಮತ್ತು ನಗರಾಭಿರುವೃದ್ಧಿ ಇಲಾಖೆಯ ಬೆಂಬಲದೊಂದಿಗೆ ಹತ್ತಿರದ ಸರ್ಕಾರಿ ಲಸಿಕಾಕರಣ ಕೇಂದ್ರಗಳಿಗೆ ಲಸಿಕಾಕರಣಕ್ಕಾಗಿ ಸಜ್ಜುಗೊಳಿಸಲಾಗುವುದು.
- ಲಸಿಕಾಕರಣ ಕುರಿತು ಮಕ್ಕಳಲ್ಲಿ ಇರುವ ಆತಂಕಗಳನ್ನು ಹೋಗಲಾಡಿಸಲು ಭಾರತೀಯ ಮಕ್ಕಳ ತಜ್ಞರ ಸಂಘ (IAP) ಮತ್ತು ಖಾಸಗಿ ಮಕ್ಕಳ ವೈದ್ಯರ ಸಹಕಾರ ಕೋರಿದೆ.
- ಅರೋಗ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಲಿದ್ದಾರೆ ಮತ್ತು ಈ ಕಾರ್ಯಕ್ರಮದ ಗುಣಪಟ್ಟದ ಅನುಷ್ಠಾನದ ಕುರಿತು ಖಾತರಿ ಪಡೆದುಕೊಳ್ಳಲಿದ್ದಾರೆ.
- ಲಸಿಕಾಕರಣದ ಕುರಿತು ಪೋಷಕರಲ್ಲಿ ಇರುವ ಲಸಿಕೆ ಹಿಂಜರಿಕೆ ಅಥವಾ ಅನುಮಾನ ಹೋಗಲಾಡಿಸಲು ಎಲ್ಲಾ ಜಿಲ್ಲೆಗಳಲ್ಲಿ ಲಸಿಕಾಕರಣದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.
- ಲಸಿಕಾಕರಣದ ಕುರಿತು ಪ್ರಿಂಟ್, ಸೋಶಿಯಲ್ ಮೀಡಿಯಾ, ವಿಡಿಯೋ ಸಂದೇಶ ಮತ್ತು ರೇಡಿಯೋ ಜಿಂಗಲ್ಸ್ ಮುಖಾಂತರ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಚಟುವಟಿಗನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಎಲ್ಲ ಸರ್ಕಾರಿ ಕೋವಿಡ್-19 ಲಸಿಕಾ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕಾಕರಣ ನಡೆಸಲಾಗುವುದು.